## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**CC 531/2025** **PW- 1**

ದಿಃ **05.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಆರೋಪಿ ಪರ ಶ್ರೀ ಎಮ್ ವಾಯ್ ಡಿ ವಕೀಲರಿಂದಃ**

ನವನಗರ ಪೊಲೀಸ್ ಠಾಣೆಯಲ್ಲಿ ಕಳೆದ 2 ವರ್ಷಗಳಿಂದ ಪಿ ಎಸ್ ಐ ಆಗಿ ಕಾರ್ಯನಿರ್ವಹಿಸುತ್ತಿದ್ದರಿಂದ ನವನಗರ ಸುತ್ತಮುತ್ತಲಿನ ಸಾರ್ವಜನಿಕರ ಪರಿಚಯ ಇರುತ್ತದೆ ಎಂದರೆ ಸರಿ. ದಿಃ 21.09.2024 ರಂದು ರಾತ್ರಿ 11.30 ಗಂಟೆಗೆ ರಾಯಲ್ ರಿಜ್ ಹೊಟೆಲನಲ್ಲಿ ಧ್ವನಿವರ್ಧಕಗಳ ಮುಖಾಂತರ ಜೋರಾಗಿ ಸಂಗೀತ ಹಚ್ಚಿ ಶಬ್ದ ಮಾಡುತ್ತಿದ್ದಾರೆ ಅಂತಾ ನಮಗೆ ಮಾಹಿತಿ ನೀಡಿದ ಸಾರ್ವಜನಿಕರ ಹೆಸರು ಹೇಳಲು ಆಗುವುದಿಲ್ಲ. ಇದು ನಮಗೆ ಬಾತ್ಮಿ ಬಂದಿದೆ. ಆ ದಿವಸ ಯಾವದೇ ಸಾರ್ವಜನಿಕರು ನಮಗೆ ದೂರು ನೀಡಿಲ್ಲ ಎಂದರೆ ಸರಿಯಲ್ಲ. ರಾತ್ರಿ 12 ಗಂಟೆಗೆ ಅಲ್ಲಿ ಸಾರಾಯಿ ಮತ್ತು ಊಟ ಪೂರೈಸುತ್ತಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 21.09.2024 ರಂದು ರಾತ್ರಿ 12 ಗಂಟೆಗೆ ಘಟನಾ ಸ್ಥಳಕ್ಕೆ ಹೋದಾಗ ಗ್ರಾಹಕರು ಇದ್ದರು ಅಂತಾ ಹೇಳಿದ್ದು ಅವರ ಹೇಳಿಕೆ ಪಡೆದಿಲ್ಲ. ಆ ಸಮಯದಲ್ಲಿ ಪೊಟೊ ಮತ್ತು ವಿಡಿಯೊಗ್ರಾಫಿ ಮಾಡಿಲ್ಲ. ದಿಃ 21.09.2024 ರಂದು ರಾತ್ರಿ 12 ಗಂಟೆಗೆ ಅವಧಿ ಮೀರಿ ರಾಯಲ್ ರಿಜ್ ಹೊಟೇಲನಲ್ಲಿ ಯಾರು ಸಾರಾಯಿ ಸೇವಿಸುವುದು ಹಾಗೂ ಊಟ ಮಾಡಿಲ್ಲ ಹಾಗೂ ಸಂಗೀತ ಶಬ್ದ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾಃ 4 ರವರು ಆ ದಿವಸ ರಾಯಲ್ ರಿಜ್ ಹೊಟೆಲಗೆ ಹೋಗಿಯೆ ಇಲ್ಲ ಎಂದರೆ ಸರಿಯಲ್ಲ. ದಿಃ 22.09.2024 ರಂದು ಸಿಸಿಟಿವಿ ಪೊಟೇಜ ಇರುವ ಡಿವಿಡಿಯನ್ನು ಪರಿಶೀಲನೆ ಮಾಡಿದ್ದೇನೆ ಅಂತಾ ಹೇಳಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಿಃ 21.09.2024 ರಂದು ರಾತ್ರಿ 12 ಗಂಟೆಗೆ ಆ ರೀತಿ ಯಾವದೇ ಘಟನೆ ನಡೆಯದೇ ಇರುವುದರಿಂದ ನಾನು ಸಿಸಿಟಿವಿ ಫೂಟೇಜ, ಡಿವಿಡಿ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಜೋರಾಗಿ ಶಬ್ದ ಕೇಳಿ ಬರುತ್ತದೆ ಅಂತಾ ಹೇಳಿದ್ದು ಅದರ ಮಾಪನ ಮಾಡಿಲ್ಲ. ಆ ದಿವಸ ಸಂಗೀತ ಶಬ್ದ ಆಗಿಯೆ ಇಲ್ಲ ನಾವು ಸುಳ್ಳು ಪ್ರಕರಣ ದಾಖಲಿಸಿದ್ದೇವೆ

ಎಂದರೆ ಸರಿಯಲ್ಲ. ಚಾಸಾಃ 2 ಮತ್ತು 3 ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ದಿಃ 26.09.2024 ರಂದು ನಾನು ದೂರು ಕೊಟ್ಟೆ. ದಿಃ 21.09.2024 ರಿಂದ ದಿಃ 26.09.2024 ರವರೆಗೆ ದೂರು ದಾಖಲಿಸಲು ಯಾಕೆ ವಿಳಂಬ ಮಾಡಿದೆ ಹಾಗೂ ಅದರ ಬಗ್ಗೆ ವಿವರಣೆಯನ್ನು ಹೇಳಿಲ್ಲ ಎಂದರೆ ಸಾಕ್ಷಿ ತಾನು ಡಿವಿಆರ್ ಪರಿಶೀಲಿಸಲು ಸಮಯ ಬೇಕಾಗಿದ್ದು ಅದನ್ನು ದಿನದ ಕಾರ್ಯ ಮಾಡುತ್ತಾ ಪರಿಶೀಲನೆ ಮಾಡಿ ನಂತರ ದೂರು ಕೊಟ್ಟೆ ಎಂದು ನುಡಿಯುತ್ತಾರೆ. ದಿಃ 27.09.2024 ರಂದು ನಾನು ಯಾವದೇ ಪಂಚನಾಮೆ ಮಾಡಿಯೆ ಇಲ್ಲ ಎಂದರೆ ಸರಿಯಲ್ಲ. ಚಾಸಾಃ 2 ಮತ್ತು 3 ಘಟನಾ ಸ್ಥಳಕ್ಕೆ ಬಂದೇ ಇಲ್ಲ ಎಂದರೆ ಸರಿಯಲ್ಲ. ನಿಪಿ.4 ಮತ್ತು 5 ನ್ನು ಘಟನಾ ಸ್ಥಳಕ್ಕೆ ಹೋಗದೇ ನಮ್ಮ ಠಾಣೆಯಲ್ಲೇ ಕುಳಿತು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ.6 ಪೊಟೊದಲ್ಲಿ ದಿನಾಂಕ, ಸಮಯ, ಸ್ಥಳ ನಮೂದಾಗಿಲ್ಲ ಎಂದರೆ ಸರಿ. ರಾಯಲ್ ರಿಜ್ ಹೊಟೇಲನ ಮಾಲಿಕರು ತಮ್ಮ ವ್ಯವಹಾರವನ್ನು ಕಾನೂನು ಬದ್ದವಾಗಿ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಸಂಖ್ಯೆ ಹೆಚ್ಚಿಗೆ ತೊರಿಸುವ ಸಲುವಾಗಿ ನಮ್ಮ ಹಿರಿಯ ಅಧಿಕಾರಿಗಳ ಮಾತು ಕೇಳಿ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಕೆ ಪಿ ಆ್ಯಕ್ಟ ಅಡಿಯಲ್ಲಿ ಆರೋಪಿತರಿಗೆ ನೊಟಿಸ ಕೊಟ್ಟಿದ್ದೇವೆ ಅಂತಾ ಹೇಳಿದ್ದು ಅದರ ಮೂಲ ಪ್ರತಿಯನ್ನು ಆರೋಪಿತರಿಗೆ ನೀಡಿದೆವು. ನಿಪಿ.2 ಆ ದಾಖಲಾತಿ ಆಗಿರುತ್ತದೆ. ನಿಪಿ.2 ನೊಟಿಸನಲ್ಲಿ ದಿಃ 22.09.2025 ರಂದು ನೊಟಿಸ ಕೊಟ್ಟಿದ್ದೇನೆ ಅಂತಾ ನಮೂದು ಇದೆ ಎಂದರೆ ಸಾಕ್ಷಿ ನಜರಚುಕಿನಿಂದ ತಪ್ಪಾಗಿ 2025 ಅಂತಾ ಬರೆದಿದ್ದೇನೆ ಎಂದು ನುಡಿಯುತ್ತಾರೆ. ನಜರಚುಕಿನಿಂದ ಇಸವಿ ತಪ್ಪು ಬರೆದಿದೆ ಅಂತಾ ತನಿಖಾಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿಲ್ಲ. ಆರೋಪಿತರಿಗೆ ಯಾವದೇ ರೀತಿಯಿಂದ ನಿಪಿ.2 ನೊಟಿಸನ್ನು ಕೊಟ್ಟಿಲ್ಲ ಹಾಗೂ ಕೊಟ್ಟಿದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(**ಶ್ರೀ ರಮೇಶ ಎಸ್ ಗಾಣಿಗೇರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ**.**